**ದಿಃ 26.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ.ಕೆ.ಹೆಚ್.ಇ ವಕೀಲರಿಂದಃ 1 ರಿಂದ 3 ನೇ ಪ್ರತಿವಾದಿಯರ ಪರವಾಗಿಃ**

**17)** ಸರ್ವೆ ನಂಬರಃ 89/2 ರ ಆಸ್ತಿಯನ್ನು ಖರೀದಿ ಮಾಡಿರುವ ಕೆ.ಎಲ್.ವಿಶ್ವನಾಥ ಎಂಬುವವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂಬ ಸಲಹೆಗೆ ಸಾಕ್ಷಿಯು 01 ಎಕರೆ ಆಸ್ತಿಯನ್ನು ನನ್ನ ತಂದೆ ಮಾರಾಟ ಮಾಡಿದ್ದಾರೆ, ಆ ಆಸ್ತಿ ಬೇಡ ಎಂದು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಉತ್ತರಿಸಿದ್ದಾರೆ. ನನ್ನ ತಂದೆ 01 ಎಕರೆ ಆಸ್ತಿಯನ್ನು ನನ್ನ ತಂದೆ ಮಾರಾಟ ಮಾಡಿದ್ದ ಬಗ್ಗೆ ದಾಖಲೆಯನ್ನು ಕೊಟ್ಟಿಲ್ಲ. ನನ್ನ ತಂದೆ ಮಧ್ಯಪಾನ ಚಟಕ್ಕೆ ಬಿದ್ದಿದ್ದು, ಸಾಲ ಮಾಡಿಕೊಂಡಿದ್ದರಿಂದ, ನನ್ನ ಮದುವೆಯ ಖರ್ಚಿಗೆ ಮತ್ತು ಮನೆತನದ ಖರ್ಚಿಗಾಗಿ ನನ್ನ ತಮ್ಮನೇ ಆಸ್ತಿಯನ್ನು ನನ್ನ ತಂದೆಯ ಕಡೆಯಿಂದ ಮಾರಾಟ ಮಾಡಿಸಿದ್ದಾರೆ ಅಂದರೆ ಸರಿಯಲ್ಲ. ನನ್ನ ಮದುವೆಯ ಖರ್ಚಿಗಾಗಿ ಆಸ್ತಿಯನ್ನು ಮಾರಾಟ ಮಾಡಿದ್ದರೂ, ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**18)** ದಾವಾ ಆಸ್ತಿಗಳು ಮೂಲತಃ ನನ್ನ ಅಜ್ಜನ ಆಸ್ತಿಗಳು. ನನ್ನ ಅಜ್ಜನಿಂದ ಬಂದ ಆಸ್ತಿಗಳು ಎಂದು ತೋರಿಸಲು ದಾಖಲೆಯನ್ನು ಕೊಟ್ಟಿಲ್ಲ. ಆ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ದಾವಾ ಆಸ್ತಿಗಳು ಮೂಲತಃ ಭೂನ್ಯಾಯ ಮಂಡಳಿಯಿಂದ ನನ್ನ ತಂದೆಗೆ ಬಂದ ಆಸ್ತಿಗಳು ಎಂಬ ಸಲಹೆಗೆ ಸಾಕ್ಷಿಯು ನಮ್ಮ ಅಜ್ಜನಿಂದ ಬಂದ ಆಸ್ತಿಗಳು ಎಂದು ಉತ್ತರಿಸಿದ್ದಾರೆ. ಭೂ ನ್ಯಾಯ ಮಂಡಳಿಯಿಂದ ಬಂದ ಆಸ್ತಿಗಳು ಆಗಿದ್ದರೂ, ನಮ್ಮ ಅಜ್ಜನಿಂದ ಬಂದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮತ್ತು ಸಹೋದರರ ನಡುವೆ ಯಾವುದೇ ವ್ಯಾಜ್ಯ ಬರಬಾರದು

ಎಂದು ನನ್ನ ತಂದೆ ಜೀವಂತವಿದ್ದಾಗಲೇ ಒಂದು ವ್ಯವಸ್ಥಾಪಕ ಪತ್ರ ಬರೆದುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ವ್ಯವಸ್ಥಾಪಕ ಪತ್ರದ ಪ್ರಕಾರ ಪ್ರತಿವಾದಿಯರ ಹೆಸರಿಗೆ ಖಾತೆ ವರ್ಗಾವಣೆಯಾಗಿದೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಆಗಿದ್ದರಿಂದ ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರ ಹೆಸರಿಗೆ ಖಾತೆ ವರ್ಗಾವಣೆಯಾದ ನಂತರ ಪ್ರತಿವಾದಿಯರು ರಾಷ್ಟ್ರೀಕೃತ ಬ್ಯಾಂಕ್ ಮತ್ತು ಸೊಸೈಟಿಗಳಲ್ಲಿ ಸಾಲ ಪಡೆದಿದ್ದಾರೆ ಅಂದರೆ ಸರಿಯಲ್ಲ. ನನಗೆ ಈ ಎಲ್ಲ ವಿಚಾರ ಗೊತ್ತಿದ್ದರೂ, ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**19)** ನಾನು ಮತ್ತು ನನ್ನ ಸಹೋದರಿಯರು ಮದುವೆಯಾದ ಮೇಲೆ ನಮ್ಮ ಗಂಡನ ಮನೆಯಲ್ಲಿ ವಾಸ ಇದ್ದಾರೆ ಅಂದರೆ ಸರಿ. ದಾವಾ ಆಸ್ತಿಗಳಲ್ಲಿ ಎಂದೂ ನಾವು ಸ್ವಾಧೀನದಲ್ಲಿ ಇಲ್ಲ ಅಂದರೆ ಸರಿಯಲ್ಲ. ವ್ಯವಸ್ಥಾಪಕ ಪತ್ರದ ಮೇಲೆ ಖಾತೆ ವರ್ಗಾವಣೆಯಾಗಿರುವ ಮ್ಯೂಟೇಶನನ್ನು ಪ್ರಶ್ನಿಸಿ ಸುಳ್ಳು ಅಂಶಗಳ ಮೇಲ್ಮನವಿ ಸಲ್ಲಿಸಿದ್ದೇವು ಅಂದರೆ ಸರಿಯಲ್ಲ. ನನ್ನ ತಂದೆಯನ್ನು ಅದರಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವು ಅಂದರೆ ಸರಿ. ಆ ಮೇಲ್ಮನವಿಯಲ್ಲಿ ನನ್ನ ತಂದೆ ಯಾವುದೇ ತಕರಾರು ಮಾಡಿಲ್ಲ ಅಂದರೆ ಸರಿಯಲ್ಲ. ವ್ಯವಸ್ಥಾ ಪತ್ರವನ್ನು ಬರೆದಿರುವದು ತಪ್ಪು ಎಂದು ಗೊತ್ತಿದ್ದಿದ್ದರೇ ನನ್ನ ತಂದೆ ತಕರಾರು ಸಲ್ಲಿಸುತ್ತಿದ್ದರು ಅಂದರೆ ಸರಿಯಲ್ಲ. ರಾಜಕೀಯ ಪ್ರಭಾವದಿಂದ ಮ್ಯೂಟೇಶನನ್ನು ರದ್ದುಪಡಿಸಿದ್ದೇವೆ ಅಂದರೆ ಸರಿಯಲ್ಲ.

**20)** ಪ್ರತಿವಾದಿಯರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಉಪವಿಭಾಗಾಧಿಕಾರಿಗಳ ಆದೇಶದ ವಿರುದ್ದ ಮೇಲ್ಮನವಿ ಸಲ್ಲಿಸಿದ್ದರು ಅಂದರೆ ಸರಿ. ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ನಿಗಧಿತ ಅವಧಿಯಲ್ಲಿ ಈ ದಾವೆ ದಾಖಲಿಸಿಲ್ಲ ಎಂಬ ಸಲಹೆಗೆ ಸಾಕ್ಷಿಯು ನನಗೆ ಗೊತ್ತಾಗಿಲ್ಲ ಎಂದು

ಉತ್ತರಿಸಿದ್ದಾರೆ. ಕೋಳೂರ ಪಂಚಾಯತಿ ಆಸ್ತಿಗಳನ್ನು ಸಹ ನನ್ನ ತಂದೆಯ ಜೀವಿತಾವಧಿಯಲ್ಲಿ ಪ್ರತಿವಾದಿ 1 ರಿಂದ 3 ರವರಿಗೆ ವ್ಯವಸ್ಥಾ ಪತ್ರ ಬರೆದುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಖಾತಾ ವ್ಯವಸ್ಥಾ ಪತ್ರದ ಪ್ರಕಾರ ಪಂಚಾಯತಿ ಆಸ್ತಿಗಳು ಪ್ರತಿವಾದಿ 1 ರಿಂದ 3 ರವರ ಹೆಸರಿಗೆ ಖಾತೆ ವರ್ಗಾವಣೆಯಾಗಿದೆ ಅಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3 ರವರ ಹೆಸರಿಗೆ ಖಾತೆ ವರ್ಗಾವಣೆಯಾಗಿರುವದನ್ನು ಇದುವರೆಗೆ ಪ್ರಶ್ನೆ ಮಾಡಿಲ್ಲ ಅಂದರೆ ಸರಿಯಲ್ಲ.

**21)** 1 ನೇ ಪ್ರತಿವಾದಿಯ ಹೆಸರಿಗೆ ಬಂದಿರುವ ಮನೆ ಆಸ್ತಿ ನಂಬರಃ 24/2 ನ್ನು ತನ್ನ ಹೆಂಡತಿ ಜೈನಬ್ಬಿರವರ ಹೆಸರಿಗೆ ವರ್ಗಾವಣೆ ಮಾಡಿದ್ದಾರೆ ಎಂಬ ಸಲಹೆಗೆ ಸಾಕ್ಷಿಯು ನನಗೆ ಗೊತ್ತಿಲ್ಲದೇ ಮಾಡಿಕೊಂಡಿದ್ದಾರೆ ಎಂದು ಉತ್ತರಿಸಿದ್ದಾರೆ. ಜೈನಬ್ಬೀರವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿಗೆ ಇರುವ ಆಸ್ತಿಯ ಸಂಖ್ಯೆಃ 24/2 ಎ ಎಂದು ಆಗಿದೆ ಎಂದು, ಆತನ ಹೆಂಡತಿಯ ಹೆಸರಿಗೆ ಖಾತೆಯಾಗಿರುವ ಆಸ್ತಿಯ ಸಂಖ್ಯೆಃ 24/2 ಬಿ ಎಂದು ಆಗಿದೆ ಎನ್ನುವದು ನನಗೆ ಗೊತ್ತಿಲ್ಲ. ಈ ಆಸ್ತಿ 1 ನೇ ಪ್ರತಿವಾದಿಯ ಹೆಂಡತಿಯ ಹೆಸರಿಗೆ ಖಾತೆ ವರ್ಗಾವಣೆಯಾಗಿರುವದು ಗೊತ್ತಿದ್ದರೂ, ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿಗೆ ಸರ್ಕಾರದಿಂದ ಮನೆ ಮಂಜೂರಾಗಿದೆ ಅಂದರೆ ಸರಿಯಲ್ಲ. 2018 ರಲ್ಲಿಯೇ 1 ನೇ ಪ್ರತಿವಾದಿಯ ಹೆಂಡತಿ ಹೆಸರಿಗೆ ವರ್ಗಾವಣೆಯಾಗಿದೆ ಅಂದರೆ ಸರಿಯಲ್ಲ. 2018 ರಲ್ಲಿಯೇ ಖಾತೆ ವರ್ಗಾವಣೆಯಾಗಿರುವ ವಿಷಯ ನನಗೆ ಗೊತ್ತಿದ್ದರೂ, ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಆಲಿಸಿ ಅಂತಿಮವಾಗಿ ಮುಂದೂಡಲಾಯಿತು)**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.